# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ವೀರೇಶಾನಂದ

ಭಾಗ ೫


## ಸಮ್ಮೇಳನದ ಶುಭಾರಂಭದ ಬೆಳಗು

ಸರ್ವಧರ್ಮ ಸಮ್ಮೇಳನವು ೧೮೯೩ರ ಸೆಪ್ಟೆಂಬರ್ ೧೧ರಂದು ಪ್ರಾತಃಕಾಲ ಆರಂಭವಾಯಿತು. ಇಡೀ ಸಮ್ಮೇಳನವು ಆಯೋಜಿತಗೊಂಡಿದ್ದು ಆಗತಾನೇ ನಿರ್ಮಾಣವಾಗಿದ್ದ 'ಆರ್ಟ್ ಇನ್‌ಸ್ಟಿಟ್ಯೂಟ್' ಎನ್ನುವ ಸುಂದರವೂ, ಬೃಹದಾಕಾರವೂ ಆದ ಕಟ್ಟಡದಲ್ಲಿ. ಈ ಕಟ್ಟಡವು ಚಿಕಾಗೋ ನಗರದ 'ಮಿಷಿಗನ್ ಅವೆನ್ಯೂ' ಎಂಬ ರಸ್ತೆಯಲ್ಲಿ ಈಗಲೂ ಇದೆ. ಆದರೆ ತನ್ನ ರಚನೆಯಲ್ಲಿ ಹಲವಾರು ಮಾರ್ಪಾಡುಗಳನ್ನು ಕಂಡಿದೆ. ಈ ಕಟ್ಟಡವನ್ನು ನಿರ್ಮಾಣ ಮಾಡಿದ್ದರ ಮುಖ್ಯ ಉದ್ದೇಶ ಚಿತ್ರಪಟಗಳ ಮತ್ತು ಕಲಾಕೃತಿಗಳ ಪ್ರದರ್ಶನ. ನೂತನ ಕಟ್ಟಡವಾಗಿದ್ದರಿಂದ ಯಾವ ಚಿತ್ರಪ್ರದರ್ಶನವೂ ಅಲ್ಲಿ ಇನ್ನೂ ಆಯೋಜಿತಗೊಂಡಿರಲಿಲ್ಲ. ಆರ್ಟ್ ಇನ್‌ಸ್ಟಿಟ್ಯೂಟ್ ಕಟ್ಟಡದಲ್ಲಿ ಸರಿಸುಮಾರು ಮೂವತ್ತು ಅಂಗಣಗಳಿದ್ದವು. ಅವುಗಳನ್ನು ಕೊಲಂಬಿಯನ್ ವಸ್ತು ಪ್ರದರ್ಶನದ ಹಲವಾರು ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳಲಾಗಿತ್ತು. ಆದರೆ, ವಸ್ತುಪ್ರದರ್ಶನದ ಮುಖ್ಯ ಮೈದಾನಕ್ಕೂ ಈ ಕಟ್ಟಡಕ್ಕೂ ಬಹಳ ಅಂತರವಿತ್ತು. ಇಟಾಲಿಯನ್ ಶೈಲಿಯಲ್ಲಿ ನಿರ್ಮಾಣವಾದ ಈ ಕಟ್ಟಡದಲ್ಲಿ ಈಗ ಇರುವ ಅನೇಕ ಭಾಗಗಳನ್ನು ೧೮೯೩ರಲ್ಲಿ ಇನ್ನೂ ಕಟ್ಟಿರಲಿಲ್ಲ. ಈಗಿರುವ ಮುಖ್ಯ ಗೋಪುರವಾಗಲಿ, ಸುಂದರವಾದ ಮೆಟ್ಟಲುಗಳಾಗಲಿ ಆಗ ಇನ್ನೂ ನಿರ್ಮಾಣಗೊಂಡಿರಲಿಲ್ಲ.

ಸರ್ವಧರ್ಮ ಸಮ್ಮೇಳನದ ಸಲುವಾಗಿ ಎರಡು ದೊಡ್ಡ ಸಭಾಂಗಣಗಳನ್ನು ಗೊತ್ತುಮಾಡಲಾಗಿತ್ತು. ಪ್ರತಿಯೊಂದರಲ್ಲಿಯೂ ಮೂರು ಸಾವಿರ ಜನರಿಗೆ ಆಸನ ವ್ಯವಸ್ಥೆಯಿತ್ತು. ಇದಲ್ಲದೆ ಕನಿಷ್ಠ ಸುಮಾರು ೧೦೦೦ ಜನರು ನಿಂತು ನೋಡಬಹುದಾದ ದೊಡ್ಡ ಕೊಠಡಿಯೊಂದನ್ನು ತಾತ್ಕಾಲಿಕವಾಗಿ ನಿರ್ಮಿಸಲಾಗಿತ್ತು. ಎರಡು ಸಭಾಂಗಣಗಳಲ್ಲಿ , ಕೊಲಂಬಸ್ ಹಾಲ್ ಉತ್ತರಕ್ಕೂ, ವಾಷಿಂಗ್‌ಟನ್ ಹಾಲ್ ದಕ್ಷಿಣದಲ್ಲಿಯೂ ಇದ್ದವು. ಇದಲ್ಲದೆ ದಕ್ಷಿಣ ದಿಕ್ಕಿನಲ್ಲಿ ದೊಡ್ಡದೊಂದು ಗ್ಯಾಲರಿಯನ್ನು ಕೂಡ ಸೇರಿಸಲಾಗಿತ್ತು. ೧೮೯೩ರ ಸೆಪ್ಟೆಂಬರ್ ೧೧ರ ಬೆಳಗ್ಗೆ, ಕೊಲಂಬಸ್ ಸಭಾಂಗಣದಲ್ಲಿ ಸಭಿಕರು ಮತ್ತು ದೂರದೂರ ದೇಶಗಳಿಂದ ಬಂದಿದ್ದ ಪ್ರತಿನಿಧಿಗಳು ಈ ಸರ್ವಧರ್ಮ ಸಮ್ಮೇಳನದ ಸ್ಮರಣೀಯ ಸಂದರ್ಭವನ್ನು ಕಣ್ಣಾರೆ ತುಂಬಿಕೊಳ್ಳುವ ಸಲುವಾಗಿ ಸೇರಿದ್ದರು.

ಸರಿಯಾಗಿ ಬೆಳಗ್ಗೆ ೧೦ ಗಂಟೆಗೆ ನ್ಯೂ ಲಿಬರ್ಟಿ ಬೆಲ್ ಎನ್ನುವ ಬೃಹತ್ ಘಂಟೆಯಿಂದ ಹತ್ತು ಬಾರಿ ಗಂಭೀರ ನಿನಾದ ಹೊರಹೊಮ್ಮಿತು. ಹತ್ತು ಎನ್ನುವ ಈ ಸಂಖ್ಯೆಯು ಸಮ್ಮೇಳನ

ಚಿಕಾಗೋದ ಆರ್ಟ್ ಇನ್‌ಸ್ಟಿಟ್ಯೂಟ್, ಸರ್ವಧರ್ಮ ಸಮ್ಮೇಳನ ನಡೆದ ಸ್ಥಳ






**ಚಿಕಾಗೋ ಸರ್ವಧರ್ಮ ಸಮ್ಮೇಳನದ ಒಂದು ಚಿತ್ರ**

ದಲ್ಲಿ ಭಾಗವಹಿಸಿದ್ದ ಹತ್ತು ಪ್ರಧಾನ ಧರ್ಮಗಳನ್ನು ಸೂಚಿಸುತ್ತಿತ್ತು. ಅವುಗಳೆಂದರೆ, ಆಸ್ತಿಕವಾದ (ಬ್ರಾಹ್ಮಸಮಾಜದ ತತ್ತ್ವ), ಯಹೂದಿ ಧರ್ಮ, ಇಸ್ಲಾಂ ಧರ್ಮ, ಹಿಂದೂ ಧರ್ಮ, ಬೌದ್ಧ ಧರ್ಮ, ತಾವೋ ಧರ್ಮ, ಕನ್‌ಫ್ಯೂಸಿಯನ್ ಧರ್ಮ, ಶಿಂಟೋ ಧರ್ಮ, ಪಾರ್ಸಿ ಧರ್ಮ, ಮತ್ತು ಕ್ರೈಸ್ತಧರ್ಮ (ಕ್ಯಾಥೊಲಿಕ್ ಚರ್ಚ್, ಗ್ರೀಕ್ ಚರ್ಚ್ ಮತ್ತು ಪ್ರೊಟೆಸ್ಟಂಟ್ ಚರ್ಚ್). ಈ ಘಂಟಾನಾದವನ್ನು ಪ್ರತಿನಿಧಿಗಳು ಬಹುಶಃ ಕೇಳಿಸಿಕೊಳ್ಳಲಿಲ್ಲವೆಂದೇ ಕಾಣುತ್ತದೆ. ಏಕೆಂದರೆ, ಆ ಬೃಹದ್ ಘಂಟೆಯು ಸಭಾಂಗಣದಿಂದ ಬಹಳಷ್ಟು ದೂರದಲ್ಲಿತ್ತು. ಇದಲ್ಲದೆ, ಈ ಘಂಟಾನಾದವಾಗುವ ಮೊದಲೇ ನೂರಾರು ಜನರು ಸಭಾಂಗಣದ ಎರಡು ದೊಡ್ಡ ಓಕ್ ಮರದ ದ್ವಾರಗಳ ಮೂಲಕ ಒಳಕ್ಕೆ ಆಗಮಿಸುತ್ತಿದ್ದರು.

ಘಂಟಾನಾದವಾಯಿತು. ಇನ್ನೂ ಪ್ರತಿನಿಧಿಗಳು ವೇದಿಕೆಯನ್ನು ಅಲಂಕರಿಸಿರಲಿಲ್ಲ. ಎಲ್ಲ ಕಡೆ ನಿಶ್ಶಬ್ದವು ನೆಲೆಸಿತ್ತು. ಇದು ಚರ್ಚ್‌ನಲ್ಲಿ ಕಾಣಬರುವ ನೀರವತೆಗೆ ಸಮಾನವಾಗಿತ್ತು ಎಂದು ಪ್ರತ್ಯಕ್ಷದರ್ಶಿಗಳು ವರ್ಣಿಸುತ್ತಾರೆ. ಅವರಲ್ಲಿ ಒಬ್ಬರು ಹೀಗೆ ಬರೆಯುತ್ತಾರೆ: ''ಅದ್ಭುತವಾದ ರೀತಿಯಲ್ಲಿ ನಿಶ್ಶಬ್ದವಾಗಿ ಕುಳಿತಿದ್ದ ಬೃಹತ್ ಜನಸಮುದಾಯದ ಮಧ್ಯದಲ್ಲಿಯೇ ರೆಕ್ಕೆಗಳ ಸಪ್ಪಳವು ಕೇಳಿಬಂತು. ಒಂದು ಸಣ್ಣ ಹಕ್ಕಿಯು ತೆರೆದಿದ್ದ ಕಿಟಕಿಗಳ ಮೂಲಕ ಬಂದು, ಇನ್ನೂ ಖಾಲಿಯಾಗಿದ್ದ ಮುಖ್ಯವೇದಿಕೆಯ ಮೇಲೆ ಹಾರಿಹೋಯಿತು.''

ಪ್ರಧಾನವೇದಿಕೆಯು ಸುಮಾರು ೫೦ ಅಡಿ ಉದ್ದದಷ್ಟು ಇತ್ತು; ಇಡೀ ಸಭಾಂಗಣದ ಅಗಲವನ್ನು ಅದು ಬಹುಶಃ ಆಕ್ರಮಿಸಿಕೊಂಡಿತ್ತು. ಹಾಗೆಯೇ ಅದು ೧೦ ಅಡಿ ಎತ್ತರವಾಗಿತ್ತು. ಹಲವು ಕಲಾಕೃತಿಗಳು ವೇದಿಕೆಯನ್ನು ಅಲಂಕರಿಸಿದ್ದವು. ಗ್ರೀಕ್ ಅಮೃತಶಿಲೆಯ ಆಕೃತಿಗಳು ಕೂಡ ಇದ್ದವು. ವೇದಿಕೆಯ ಮಧ್ಯಭಾಗದಲ್ಲಿ ಸಿಂಹಾಸನದಂತೆ ಇದ್ದ ಉನ್ನತ ಆಸನವೊಂದನ್ನು ಇಡಲಾಗಿತ್ತು. ಇದು ಎರಡು ಗ್ರೀಕ್ ಪ್ರತಿಮೆಗಳ ಹಿನ್ನೆಲೆಯಲ್ಲಿ ಭವ್ಯವಾಗಿ ಕಾಣುತ್ತಿತ್ತು. ಸಮ್ಮೇಳನದ ಉದ್ಘಾಟನೆಯ ದಿವಸ ಈ ಆಸನವನ್ನು ಕಾರ್ಡಿನಲ್ ಗಿಬ್ಬನ್ಸ್ ಅವರು ಅಲಂಕರಿಸಿದ್ದರು. ಅವರು ಅಮೆರಿಕದಲ್ಲಿ ಕ್ಯಾಥೊಲಿಕ್ ಚರ್ಚ್‌ನ ಅತ್ಯುನ್ನತ ಪಾದ್ರಿಗಳಾಗಿದ್ದರು. ಈ ಸಿಂಹಾಸನದ ಎರಡೂ ಬದಿಗಳಲ್ಲಿ ಮೂರು ಸಾಲುಗಳಲ್ಲಿ ಮೂವತ್ತು ಆಸನಗಳನ್ನು ಇರಿಸಲಾಗಿತ್ತು. ಅವುಗಳು ವಿಶ್ವದಾದ್ಯಂತ ಬಂದಿದ್ದ ಪ್ರತಿನಿಧಿಗಳು, ಸಮ್ಮೇಳನದ ಆಯೋಜನಾ ಸಮಿತಿಯ ಸದಸ್ಯರು ಮತ್ತು ಆಹ್ವಾನಿತ ಗಣ್ಯರಿಗೆ ಮೀಸಲಾಗಿದ್ದವು. ಒಂದು ಮೂಲೆಯಲ್ಲಿ ಭಾಷಣಕಾರರಿಗೆ ಒಂದು ರೋಸ್ಟ್ರಮ್ ಕಾಣಿಸುತ್ತಿತ್ತು.


ಪ್ರಧಾನ ವೇದಿಕೆಯ ಮುಂದಿನ ಭಾಗದಲ್ಲಿಯೇ ಚಿಕಾಗೋ ನಗರದ ಪತ್ರಕರ್ತರಿಗೆ ಮತ್ತು ಸ್ಟೆನೋಗ್ರಾಫರುಗಳಿಗೆ ಆಸನ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಮುಂದಿನ ಸಾಲುಗಳಲ್ಲಿ ಕುಳಿತಿದ್ದ ಒಬ್ಬ ಮಹಿಳಾ ಪತ್ರಕರ್ತೆಯು ತಮ್ಮ ನೆನಪುಗಳಲ್ಲಿ ಸ್ವಾಮಿ ವಿವೇಕಾನಂದರ ಉಡುಪಿನ ತುದಿಯನ್ನು ಮುಟ್ಟಲು ಜನರ ಗುಂಪು ಹೇಗೆ ಧಾವಿಸಿ ಬರುತ್ತಿತ್ತು ಎಂದು ಸ್ಮರಿಸಿಕೊಳ್ಳುತ್ತಾರೆ. ಇದಲ್ಲದೆ, ಇಷ್ಟೆಲ್ಲ ಗೌರವಾದರಗಳ ನಡುವೆಯೂ ಸ್ವಾಮೀಜಿಯವರು ಪ್ರದರ್ಶಿಸುತ್ತಿದ್ದ ವಿನೀತಭಾವವು ಹೇಗೆ ತನ್ನನ್ನು ಪ್ರಭಾವಗೊಳಿಸಿತು ಎಂದೂ ವಿವರಿಸುತ್ತಾರೆ.

ಈ ಕಟ್ಟಡದ ಇನ್ನೊಂದು ಭಾಗದಲ್ಲಿ ಸಮ್ಮೇಳನದ ಸಮಿತಿಯ ಅಧ್ಯಕ್ಷರಾದ ಬಾನಿ ಅವರ ಕಛೇರಿಯಿತ್ತು. ಅದನ್ನು ಪ್ರತಿನಿಧಿಗಳ ಸ್ವಾಗತ ಕೊಠಡಿಯನ್ನಾಗಿ ಪರಿವರ್ತಿಸಲಾಗಿತ್ತು. ಅಲ್ಲಿನ ಜಪಾನೀಯರು, ಚೀನೀಯರು, ಭಾರತೀಯರು ತಮ್ಮ ತಮ್ಮ ವರ್ಣರಂಜಿತ ಸಾಂಪ್ರದಾಯಿಕ ಪೋಷಾಕುಗಳನ್ನು ಧರಿಸಿ ಪರಸ್ಪರ ಮಾತುಕತೆಯಾಡುತ್ತಿದ್ದರು. ಹಾಗೆಯೇ ಅಲ್ಲಿದ್ದ ಸಮೂಹದಲ್ಲಿ ಜರ್ಮನರು, ರಷಿಯನ್ನರು, ಸ್ಕಾಂಡಿನೇವಿಯಾ ದೇಶೀಯರು, ಬ್ರಿಟಿಷರು ಮತ್ತು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ

ಹಲವಾರು ದೇಶಗಳಿಂದ ಬಂದಿದ್ದ ಪ್ರತಿನಿಧಿಗಳು ಕೂಡಿಕೊಂಡಿದ್ದರು. ಇಲ್ಲಿ ಮಹಿಳೆಯರು ಮತ್ತು ಸಂನ್ಯಾಸಿನಿಯರು ಕೂಡ ಇದ್ದರು. ಈ ಸ್ವಾಗತ ಕೊಠಡಿಯ ವಾತಾವರಣವೇ ವಿಶ್ವಸಹೋದರ ಭಾವದಿಂದ ಕೂಡಿತ್ತು.

ಹತ್ತು ಗಂಟೆಯ ನಿಗದಿತ ಸಮಯವಾಗುತ್ತಿದ್ದಂತೆಯೇ, ಕಂಗೊಳಿಸುತ್ತಿದ್ದ ಪ್ರತಿನಿಧಿಗಳ ಸಮಸ್ತ ಕೂಟವು ವೇದಿಕೆಯತ್ತ ಮೆರವಣಿಗೆಯಲ್ಲಿ ನಿಧಾನವಾಗಿ ಹೊರಟಿತು. ಈ ಮೋಹಕವಾದ ಮೆರವಣಿಗೆಯ ಮುಂದುಗಡೆ, ಅಧ್ಯಕ್ಷ ಬಾನಿ ಮತ್ತು ಕಾರ್ಡಿನಲ್ ಗಿಬ್ಬನ್ಸ್ — ಇಬ್ಬರೂ ಜೊತೆಜೊತೆಯಲ್ಲಿ ಸಾಗುತ್ತಿದ್ದರು. ಗಿಬ್ಬನ್ಸನು ತನ್ನ ಹೊಳೆಯುತ್ತಿರುವ ನಿಲುವಂಗಿಯಿಂದ ಶೋಭಾಯಮಾನವಾಗಿ ಕಾಣಿಸುತ್ತಿದ್ದನು; ಇದಕ್ಕೆ ಸರಿಸಮನಂತೆ, ಅಧ್ಯಕ್ಷ ಬಾನಿಯು ತನ್ನ ಉಡುಪಿನಲ್ಲಿ ಗಂಭೀರವಾಗಿ ಕಾಣಿಸುತ್ತಿದ್ದನು. ಅವರ ಹಿಂದೆ ಸಮ್ಮೇಳನದ ಸಮಿತಿಯ ಇತರ ಪದಾಧಿಕಾರಿಗಳು ಬೆಲೆಬಾಳುವ ಪೋಷಾಕುಗಳನ್ನು ಧರಿಸಿಕೊಂಡು, ಹೆಜ್ಜೆಯಿಡುತ್ತಿದ್ದರು. ಮೆರವಣಿಗೆಯು ನಿಧಾನವಾಗಿ ದೌಲತ್ತಿನಿಂದ ಸಭಾಂಗಣದ ಹಿಂಭಾಗವನ್ನು ತಲುಪಿತು. ಸುತ್ತುವರಿದಿದ್ದ ಜನರು ದಾರಿಮಾಡಿಕೊಟ್ಟರು. ಹಲವಾರು ದೇಶಗಳ ಬಾವುಟಗಳು ಹಾರಾಡುತ್ತಿದ್ದವು ಮತ್ತು ಜನರು ಪುಂಖಾನುಪುಂಖವಾಗಿ ಜಯಘೋಷವನ್ನು ಮಾಡುತ್ತಿದ್ದರು. ಇವುಗಳ ಮಧ್ಯದಲ್ಲಿಯೇ ಪ್ರತಿನಿಧಿಗಳ ಮೆರವಣಿಗೆಯು ವೇದಿಕೆಯ ಆರೋಹಣವನ್ನು ವಿಜೃಂಭಣೆಯಿಂದ ಮಾಡಿತು.

ಹೌಟನ್ ಎಂಬ ಬರಹಗಾರನು ಹೀಗೆ ಬರೆಯುತ್ತಾನೆ: ''ಇಡೀ ದೃಶ್ಯವು ಪರಮಾದ್ಭುತವಾಗಿತ್ತು ಎಂದೇ ಹೇಳಬೇಕು. ನಿಲುವಂಗಿಗಳು, ರುಮಾಲುಗಳು, ಪೋಷಾಕುಗಳು, ವಸ್ತ್ರವಿನ್ಯಾಸಗಳು, ಇಳಿಬಿದ್ದಿದ್ದ ಕೂದಲುಗಳು, ಬೊಕ್ಕ ತಲೆಗಳು ಇವೆಲ್ಲ ಪರಿಸರವನ್ನು ನಿಜವಾಗಿಯೂ ವಿಚಿತ್ರವನ್ನಾಗಿ ಪರಿವರ್ತಿಸಿದ್ದವು. ಕಾರ್ಡಿನಲ್ ಗಿಬ್ಬನ್ಸ್ ಪ್ರತಿನಿಧಿಗಳ ಗುಂಪಿನ ಮಧ್ಯೆ ಕುಳಿತಿದ್ದರೆ, ಅವರ ಬಲಭಾಗಕ್ಕೆ ಶ್ವೇತವಸ್ತ್ರಧಾರಿಗಳಾದ ಐದು ಬೌದ್ಧಭಿಕ್ಷುಗಳು ಆಸೀನರಾಗಿದ್ದರು. ಹಾಗೆಯೇ ಅವರ ಎಡಭಾಗಕ್ಕೆ ಕಪ್ಪು ಬಣ್ಣದ ಪೋಷಾಕುಗಳನ್ನು ಧರಿಸಿದ ಸಾಂಪ್ರದಾಯಿಕ ಗ್ರೀಕ್ ಚರ್ಚ್‌ನ ಪುರೋಹಿತರು ಕುಳಿತಿದ್ದರು. ಹಾಗೆಯೇ ಚೀನಾ ದೇಶದ ಚಕ್ರವರ್ತಿಯ ಆಜ್ಞೆಯಂತೆ, ಕನ್‌ಫ್ಯೂಷಿಯನ್ ಧರ್ಮವನ್ನು ಪ್ರತಿನಿಧಿಸುತ್ತಿರುವ ಚೈನಾ ದೇಶದ ರಾಯಭಾರಿಯೊಬ್ಬರು ತಮ್ಮ ದೇಶದ ಉಡುಪುಗಳನ್ನು ಧರಿಸಿದ್ದರು. ಚಿತ್ರದಲ್ಲಿ ನೋಡಿದರೆ, ಅವರು ಚೀನಾ ದೇಶದ ಬೃಹತ್ ಬೊಂಬೆಯ ಹಾಗೆ ನೇರವಾಗಿ ಸೆಟೆದು ಕುಳಿತಿರುವುದನ್ನು ಕಾಣಬಹುದು.'' ಇದಲ್ಲದೆ, ಹೌಟನ್ ಬರಹಗಾರನು ಹೀಗೆ ಬರೆಯುತ್ತಾನೆ: ''ಜಪಾನಿನ ರಾಜಧರ್ಮದ ಪ್ರಧಾನ ಪುರೋಹಿತರು ಕಾಮನಬಿಲ್ಲಿನ ಬಣ್ಣಗಳನ್ನು ಪ್ರತಿನಿಧಿಸುವ ತಮ್ಮ ಸಾಂಪ್ರದಾಯಿಕ ನಿಲುವಂಗಿಯನ್ನು ಧರಿಸಿದ್ದರು. ಬೌದ್ಧಭಿಕ್ಷುಗಳು ಬಿಳಿ ಮತ್ತು ಹಳದಿಯ ಉಡುಪುಗಳನ್ನು ಧರಿಸಿದ್ದರು. ಗ್ರೀಕ್ ಆರ್ಚ್‌ಬಿಷಪ್ ಅವರ ಉಡುಪು ಕೂಡ ಆಕರ್ಷಕವಾಗಿತ್ತು. ಧರ್ಮಪಾಲರನ್ನು ಅವರ ಉಣ್ಣೆಯ ಬಟ್ಟೆಯಿಂದ ಗುರುತು ಹಿಡಿಯಬಹುದಿತ್ತು. ಹಾಗೆಯೇ ಮಜುಂದಾರ್ ಯುರೋಪಿನ ಪೋಷಾಕನ್ನು ಉಟ್ಟಿದ್ದರು.'' ಹೀಗೆ ಹಲವಾರು ಪ್ರತಿನಿಧಿಗಳು, ತಮ್ಮ ತಮ್ಮ ರಾಜಗಾಂಭೀರ್ಯ ನಡೆ, ನುಡಿ ಮತ್ತು ವೇಷಭೂಷಣಗಳಿಂದ ವಿರಾಜಮಾನರಾಗಿ ಕಂಗೊಳಿಸುತ್ತ ಆಸೀನರಾಗಿದ್ದರು.


ಸಮ್ಮೇಳನದಲ್ಲಿ ಸ್ವಾಮೀಜಿ

ಈ ಎಲ್ಲ ಪ್ರತಿನಿಧಿಗಳ ಮಧ್ಯೆ ಸ್ವಾಮಿ ವಿವೇಕಾನಂದರು ಎಲ್ಲಿದ್ದರು? ರೆವೆರೆಂಡ್ ವೆಂಟ್ ಎನ್ನುವ ಪ್ರತ್ಯಕ್ಷದರ್ಶಿಗಳು ಹೀಗೆ ಬರೆಯುತ್ತಾರೆ: ''ಭವ್ಯವಾದ ಕೆಂಪುಬಟ್ಟೆಯ ಉಡುಪನ್ನು ಧರಿಸಿದ್ದ ಅವರ ಕಂಚಿನಂಥ ಮುಖವು ಹಳದಿ ಬಣ್ಣದ ರುಮಾಲಿನಿಂದ ಆವೃತವಾಗಿತ್ತು.'' ಇನ್ನೊಬ್ಬರು ಹೇಳುವಂತೆ, ಸ್ವಾಮೀಜಿ ತಮ್ಮ 'ಕಿತ್ತಳೆ ಬಣ್ಣದ ರುಮಾಲು ಮತ್ತು ನಿಲುವಂಗಿ'ಗಳಿಂದ ವಿಶಿಷ್ಟವಾಗಿ ಕಾಣಬರುತ್ತಿದ್ದರು.

*(ಮುಂದುವರಿಯುವುದು)*

**''ಸ್ವಾಮಿ ವಿವೇಕಾನಂದರು ಹಿಂದೂಧರ್ಮವನ್ನು ಹಾಗೂ ಭಾರತವನ್ನು ರಕ್ಷಿಸಿದರು. ಅವರಿಲ್ಲದೆ ಇದ್ದಿದ್ದರೆ ನಾವು ನಮ್ಮ ಧರ್ಮವನ್ನು ಕಳೆದುಕೊಳ್ಳುತ್ತಿದ್ದೆವು ಹಾಗೂ ನಮ್ಮ ಸ್ವಾತಂತ್ರವನ್ನು ಪಡೆಯುತ್ತಿರಲಿಲ್ಲ. ಆದ್ದರಿಂದ ನಾವು ಎಲ್ಲವಕ್ಕೂ ಸ್ವಾಮಿ ವಿವೇಕಾನಂದರಿಗೆ ಋಣಿಗಳಾಗಿದ್ದೇವೆ. ಅವರ ಶ್ರದ್ಧೆ, ಧೈರ್ಯ ಹಾಗೂ ವಿವೇಕ ಇವು ಸದಾ ನಮಗೆ ಪ್ರೇರಣೆ ನೀಡಲಿ. ಈ ಮೂಲಕ ನಾವು ಅವರಿಂದ ಪಡೆದ ಅನರ್ಘ್ಯ ರತ್ನವನ್ನು ಜಾಗರೂಕತೆಯಿಂದ ಕಾಪಾಡಿಕೊಳ್ಳೋಣ.''**

**— ಸಿ. ರಾಜಗೋಪಾಲಾಚಾರಿ**